## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಬದಾಮಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಉಗಲವಾಟ ಗ್ರಾಮದ ವಿವಿಧ ವಸತಿ ಯೋಜನೆಗಳಲ್ಲಿನ ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಿರುವದನ್ನು ಹಿಂದಕ್ಕೆ ಪಡೆಯುವ ಕುರಿತು.

ಓದಲಾಗಿದೆ:
1. ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ವರದಿ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಲ್-14/ಸಿಆರ್-1/2005/ಬಿಜಿಕೆಟಿ ದಿನಾಂಕ: 3-10-2008.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 118 ವಿಸೇಬಿ 2009 ದಿನಾಂಕ: 13-07-2010.
3. ಕರ್ನಾಟಕ ಲೋಕಾಯುಕ್ತರ ಅಪರ ಪೋಲೀಸ್ ಮಹಾ ನಿರ್ದೇಶಕರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ) /ಎಲ್-14/ಸಿಆರ್-1/2005/ಬಿಜಿಕೆಟಿ ದಿನಾಂಕ:7-08-2012.

---

ಪ್ರಸ್ತಾವನೆ:

ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಉಗಲವಾಟ ಗ್ರಾಮದಲ್ಲಿ 1999-2000 ರಿಂದ 2003-04ನೇ ಸಾಲಿನ ಅವಧಿಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಾದ ಇಂದಿರಾ ಆವಾಸ್, ಆಶ್ರಯ, ನವಗ್ರಾಮ, ಕಚ್ಚಾಪಕ್ಕಾ, ಎಸ್.ಜಿ.ಆರ್.ವೈ., ಯೋಜನೆಗಳಡಿಯಲ್ಲಿ ಮಂಜೂರಾಗಿರುವ ಹಣವನ್ನು ಅಧಿಕಾರಿಗಳು ದುರುಪಯೋಗಪಡಿಸಿ ಕೊಂಡಿರುವುದಾಗಿ, ದಿನಾಂಕ: 25-07-2005 ರಂದು ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿದ್ದ ದೂರಿನನ್ವಯ, ಬಾಗಲಕೋಟೆ ಜಿಲ್ಲೆಯ ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 1/2005ನ್ನು ದಾಖಲಿಸಿಕೊಂಡು ನಡೆಸಿದ ತನಿಖೆಯಲ್ಲಿ, ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳ ನಿರ್ಮಾಣ ಕುರಿತು ಸರ್ಕಾರದಿಂದ ಮಂಜೂರಾದ ಹಣವನ್ನು ಫಲಾನುಭವಿಗಳಿಗೆ ಕೊಡದೇ ಹಾಗೂ ಸರಿಯಾದ ದಾಖಲೆಗಳನ್ನು ನಿರ್ವಹಿಸದೇ ಸಂಬಂಧಪಟ್ಟ ಅಧಿಕಾರಿಗಳು ಮಂಜೂರಾದ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡಿರುವುದು ತನಿಖೆಯಿಂದ ಸಾಬೀತಾಗಿದ್ದ ಕಾರಣ, ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವಂತೆ ಕೋರಿ ಕರ್ನಾಟಕ ಲೋಕಾಯುಕ್ತದ ಅಪರ ಪೋಲೀಸ್ ಮಹಾ ನಿರ್ದೇಶಕರು, ಮೇಲೆ (1) ರಲ್ಲಿ ಓದಲಾದ ಪತ್ರದೊಂದಿಗೆ ಸಲ್ಲಿಸಿದ್ದ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸದರಿ ಅವ್ಯವಹಾರದಲ್ಲಿ ಭಾಗಿಯಾಗಿದ್ದಂತಹ ವಿವಿಧ ಇಲಾಖೆಗಳ ಒಟ್ಟು 12 ಅಧಿಕಾರಿ/ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಾವಳಿಗಳು 1957ರ ನಿಯಮ-11 ರನ್ವಯ ಶಿಸ್ತುಕ್ರಮ ಜರುಗಿಸಲು, ಅದೇ ನಿಯಮಾವಳಿಗಳ ನಿಯಮ-13 ರನ್ವಯ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು, ಅದೇ ನಿಯಮಾವಳಿಗಳ ನಿಯಮ-14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಹಿಸಲಾಗಿರುತ್ತದೆ. ಈ ರೀತಿ ವಹಿಸಲಾದ ಇಲಾಖಾ ವಿಚಾರಣೆ ಹಂತವನ್ನು ತಿಳಿಸುವಂತೆ ಮಾನ್ಯ ಲೋಕಾಯುಕ್ತರ ಕಛೇರಿಯನ್ನು ಕೋರಿದ ಸಂದರ್ಭದಲ್ಲಿ, ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ, ಸರ್ಕಾರಕ್ಕೆ ಆಪಾದಿತರುಗಳ ವಿರುದ್ಧ ಸರ್ಕಾರಕ್ಕೆ ಆಪಾದಿತರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವಂತೆ ಈ ಕಛೇರಿಯಿಂದ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲವೆಂದೂ, ಗೌರವಾನ್ವಿತ ನಿಬಂಧಕರ ಶಾಖೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ-7(2)

ಪ್ರಕಾರ ವರದಿಯನ್ನು ಈ ಕಛೇರಿಯಿಂದ ಸಲ್ಲಿಸಿರುವುದಿಲ್ಲ. ಆದ ಕಾರಣ, ಗೌರವಾನ್ವಿತ ಉಪ ಲೋಕಾಯುಕ್ತರವರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ-12(3) ರ ಪ್ರಕಾರ ವರದಿಯನ್ನು ಸರ್ಕಾರಕ್ಕೆ ಕಳುಹಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ, ಸರ್ಕಾರವು ಯಾವ ವರದಿ ಆಧಾರದ ಮೇರೆಗೆ ಜಂಟಿ ಇಲಾಖೆ ವಿಚಾರಣೆಗೆ ಆದೇಶ ನೀಡಿದೆ ಎಂಬ ಅಂಶವು ತಿಳಿದುಬರುತ್ತಿಲ್ಲವೆಂದು ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ತಿಳಿಸಿರುತ್ತಾರೆ.

ಈ ವಿಚಾರದ ಕುರಿತು ಸಮಗ್ರವಾಗಿ ಪರಿಶೀಲಿಸಿದ ನಂತರ, ಸದರಿ ಅವ್ಯವಹಾರದಲ್ಲಿ ಭಾಗಿಯಾಗಿದ್ದಂತಹ ಅಧಿಕಾರಿ/ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಸರ್ಕಾರದ ಹಂತದಲ್ಲಿ ಕೈಗೊಳ್ಳಲು ಹಾಗೂ ದಿನಾಂಕ: 13-07-2010ರ ಸರ್ಕಾರಿ ಆದೇಶವನ್ನು ಹಿಂದಕ್ಕೆ ಪಡೆಯಲು ಸರ್ಕಾರವು ತೀರ್ಮಾನಿಸಿದನ್ವಯ, ಸಂಬಂಧಪಟ್ಟ ಅಧಿಕಾರಿ/ನೌಕರರುಗಳಿಗೆ ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲು ಕ್ರಮವಹಿಸಲಾಗುತ್ತಿದೆ. ಹಾಗಾಗಿ ಪ್ರಸ್ತುತ ದಿನಾಂಕ: 13-07-2010ರ ಸರ್ಕಾರಿ ಆದೇಶವನ್ನು ಹಿಂಪಡೆಯಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 118 ವಿಸೇಬಿ 2009 ಬೆಂಗಳೂರು ದಿನಾಂಕ:07-07-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿವಿಧ ಇಲಾಖೆಗಳ ಈ ಕೆಳಕಂಡ 12 ಅಧಿಕಾರಿ/ನೌಕರರುಗಳ ವಿರುದ್ಧ, ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ-11 ರನ್ವಯ ಅದೇ ನಿಯಮಾವಳಿಗಳ ನಿಯಮ-13 ರನ್ವಯ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ನಿಯಮ-14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಿದ್ದ ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 118 ವಿಸೇಬಿ 2009 ದಿನಾಂಕ: 13-07-2010ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿರುತ್ತದೆ.

| ಕ್ರ ಸಂ | ಅಧಿಕಾರಿಯ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆ. |
|---|---|
| 1 | ಶ್ರೀ ಹೆಚ್.ಎಸ್.ಪೂಜಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬದಾಮಿ. |
| 2 | ಶ್ರೀ ಸಿ.ಬಿ.ಮ್ಯಾಗೇರಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬದಾಮಿ. |
| 3 | ಶ್ರೀ ಜಿ.ಎಂ.ಸುರೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬದಾಮಿ. |
| 4 | ಶ್ರೀ ಎ.ಆರ್.ಸಾಂಗಲಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಬದಾಮಿ. |
| 5 | ಶ್ರೀ ವಿ.ಪಿ.ಬಿಕ್ಷಾವತಿಮಠ್, ಹಿಂದಿನ ಲೆಕ್ಕ ಅದೀಕ್ಷಕರು, ತಾಲ್ಲೂಕು ಪಂಚಾಯಿತಿ ಬದಾಮಿ. |
| 6 | ಶ್ರೀ ಎಂ.ಬಿ.ಕಾಂಬಳೆ, ಹಿಂದಿನ ಲೆಕ್ಕ ಅದೀಕ್ಷಕರು, ತಾಲ್ಲೂಕು ಪಂಚಾಯಿತಿ ಬದಾಮಿ. |
| 7 | ಶ್ರೀ ವಿ.ಎಸ್.ಪೂಟ್ಟಿ, ಹಿಂದಿನ ಪ್ರ.ದ.ಸ., ತಾಲ್ಲೂಕು ಪಂಚಾಯಿತಿ ಬದಾಮಿ. |
| 8 | ಶ್ರೀ ಎಂ.ಐ.ಗುಂಡಳ್ಳಿ, ಹಿಂದಿನ ಪ್ರ.ದ.ಸ., ತಾಲ್ಲೂಕು ಪಂಚಾಯಿತಿ ಬದಾಮಿ. |
| 9 | ಶ್ರೀ ಎಲ್.ಎಂ.ಮಣ್ಣೂರ್, ಹಿಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ ಮಮಟಗೇರಿ |
| 10 | ಶ್ರೀ ಆರ್.ಎಫ್.ಮೇಟಿ, ಹಿಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯಿತಿ, ಬದಾಮಿ. |
| 11 | ಶ್ರೀ ಆರ್.ಜಿ.ಕುಲಕರ್ಣಿ, ಹಿಂದಿನ ವರ್ಕ್ ಇನ್ಸಪೆಕ್ಟರ್, ತಾಲ್ಲೂಕು ಪಂಚಾಯಿತಿ, ಬದಾಮಿ. |

| | |
|---|---|
| 12 | ಶ್ರೀ ಬಿ.ಎಸ್.ಮೊಖಾಶಿ, ಹಿಂದಿನ ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯಿತಿ, ಬಾದಾಮಿ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಹನುಮಂತಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಪಶುಸಂಗೋಪನೆ ಇಲಾಖೆ, ಲೋಕೋಪಯೋಗಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
4. ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ದಕ್ಷಿಣ/ಉತ್ತರ), ಬೆಂಗಳೂರು, ಧಾರವಾಡ.
5. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ.
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
8. ಉಪ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
9. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ ಪಂಚಾಯಿತಿ ಬಾಗಲಕೋಟೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಪಶುಸಂಗೋಪನೆ ಇಲಾಖೆ, ಲೋಕೋಪಯೋಗಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
11. ಸಂಬಂಧಿಸಿದ ಅಧಿಕಾರಿ / ನೌಕರರಿಗೆ.
12. ಮೇಲ್ವಿಚಾರಕರು, ಗಣಕ ಕೇಂದ್ರ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಎಸ್‌ಬಿಪಿ/-